ಕೃಷ್ಣರಾಜಪುರಂಗೆ ಸರ್ಕಾರಿ ಪ್ರಥಮ ದರ್ಜೆ ಮಹಾ ವಿದ್ಯಾಲಯಂ

೫೭. ಶ್ರೀ ವಿ. ಕೃಷ್ಣಪ್ಪ (ವರ್ತೂರು). —ಮಾನ್ಯ ಶಿಕ್ಷಣ, ಯುವಜನ ವ್ಯವಹಾರಗಳು, ಕ್ರೀಡೆಗಳು, ಕನ್ನಡ ಮತ್ತು ಸಂಸ್ಕೃತಿ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ಬೆಂಗಳೂರು ದಕ್ಷಿಣ ತಾಲ್ಲೂಕು ಕೃಷ್ಣರಾಜಪುರಂಗೆ ಸರ್ಕಾರಿ ಪ್ರಥಮ ದರ್ಜೆ ಕಾಲೇಜು ಮಂಜೂರಾಗಿದೆಯೇ ?

ಆ) ಹಾಗಿದ್ದಲ್ಲಿ ನಿವೇಶನ ಕಟ್ಟಡ ಹಾಗೂ ಸಿಬ್ಬಂದಿ ಸಲುವಾಗಿ ಶಿಕ್ಷಣ ಇಲಾಖೆ ಕೈಗೊಂಡ ಕ್ರಮಂಗಳೇನು ?

ಇ) ಸದರಿ ಕಾಲೇಜನ್ನು ಈ ಶೈಕ್ಷಣಿಕ ವರ್ಷದಿಂದಲೇ ಪ್ರಾರಂಭಿಸಲಾಗುವುದೇ?

ಶ್ರೀ ಕೆ. ಎಚ್. ರಂಗನಾಥ್ (ಶಿಕ್ಷಣ ಮಂತ್ರಿಗಳು).—

ಅ) ಇಲ್ಲ.

ಆ) ಉದ್ಭವಿಸುವುದಿಲ್ಲ.

ಇ) ಇಲ್ಲ.

ಮಂಗಳೂರು ಮಹಾನಗರ ಪಾಲಿಕೆಗೆ ಸುಂಕ ಪರಿಹಾರ ಬಾಕಿ

೧೧೩. ಶ್ರೀ ವಿಜಯಕುಮಾರ್ ಶೆಟ್ಟಿ (ಸುರತ್ಕಲ್). —ಮಾನ್ಯ ವಸತಿ ಮತ್ತು ನಗರಾಭಿವೃದ್ಧಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ಮಂಗಳೂರು ಮಹಾನಗರ ಪಾಲಿಕೆ ಹಾಗೂ ಸುರತ್ಕಲ್ ಪುರಸಭೆಗಳಿಗೆ ಆಕ್ಟ್ರಾಯ್ ಪರಿಹಾರದ ರೂಪದಲ್ಲಿ ಸರ್ಕಾರದವರು ಕೊಡಬೇಕಾಗಿರುವ ಹಣದ ವಾರ್ಷಿಕ ಪ್ರೊತ್ಸವೆಷ್ಟು ?

ಆ) ಈಗ ಕೊಡಬೇಕಾಗಿರುವ ಆಕ್ಟ್ರಾಯ್ ಪರಿಹಾರದ ಬಾಬ್ತು ಬಾಕಿಯ ಪ್ರಮಾಣವೆಷ್ಟು.

ಇ) ಈ ಬಾಕಿ ನೀಡದಿರುವ ಕಾರಣ ಈ ಪುರಸಭೆಗಳ ಅಭಿವೃದ್ಧಿ ಕಾರ್ಯಗಳಿಗೆ ತೊಂದರೆಯಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ?

ಈ) ಹಾಗಿದ್ದಲ್ಲಿ ಸರ್ಕಾರವು ಕೂಡಲೇ ಬಾಕಿ ಹಣ ಬಿಡುಗಡೆ ಮಾಡಲು ಕ್ರಮ ಕೈಗೊಳ್ಳುವುದೇ?

ಶ್ರೀ ಟಿ. ಎನ್. ನರಸಿಂಹಮೂರ್ತಿ (ವಸತಿ ಮತ್ತು ನಗರಾಭಿವೃದ್ಧಿ ಮಂತ್ರಿಗಳು).—

ಅ) ಮಹಾನಗರ ಪಾಲಿಕೆ ಮಂಗಳೂರು, ರೂ. ೨,೩೬,೪೬,೦೫೮ ಗಳು ಸುರತ್ಕಲ್ ಪುರಸಭೆಗೆ ರೂ. ೬೧,೫೯೨.

ಆ) ಇಲ್ಲಾ

ಇ) ನಿಗದಿಪಡಿಸಿದ ಆಕ್ಟ್ರಾಯ್ ಅನುದಾನವನ್ನು ಬಿಡುಗಡೆ ಮಾಡಲಾಗಿದೆ.

ಈ) ಈ ಪ್ರಶ್ನೆ ಉದ್ಭವಿಸುವುದಿಲ್ಲ.

ಆಫಜಲ್‌ಪುರ ತಾಲ್ಲೂಕಿಗೆ ಬೀಜ ಉತ್ಪಾದನೆ ಕೇಂದ್ರ

೩೮. ಶ್ರೀ ಮಾಲೀಕಯ್ಯ ವಿ. ಗುತ್ತೇದಾರ. (ಆಫಜಲ್‌ಪುರ).—ಮಾನ್ಯ ಕೃಷಿ ಮತ್ತು ತೋಗಾರಿಕೆ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಆಫಜಲ್‌ಪುರ ತಾಲ್ಲೂಕಿನಲ್ಲಿ ಬೀಜ ಉತ್ಪಾದನೆ ಕೇಂದ್ರ ಇಲ್ಲದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಆ) ಹಾಗಿದ್ದಲ್ಲಿ ಅದಕ್ಕೆ ಕಾರಣಗಳೇನು?

ಇ) ಈ ತಾಲ್ಲೂಕಿನಲ್ಲಿ ಬೀಜೋತ್ಪಾದನಾ ಕೇಂದ್ರವನ್ನು ೧೯೯೦-೯೧ ನೇ ಸಾಲಿನಲ್ಲಿ ಪ್ರಾರಂಭಿಸುವ ಉದ್ದೇಶ ಸರ್ಕಾರದವರಿಗಿದೆಯೇ?